# ಕನ್ನಡ ಸಾಹಿತ್ಯದಲ್ಲಿ ಮನುಷ್ಯ ಮತ್ತು ಮಾನವತ್ವ

**ಪ್ರಕಾಶ ಬಿ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಶಿರಸಿ–581401.

ನಮ್ಮ ಕಾಲದ ಮನುಷ್ಯ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳು ವಿಭಿನ್ನವಾಗಿವೆ. ಇದಕ್ಕೆ ಕಾರಣವಾಗಿರುವುದು ನಾವು ಬದುಕುತ್ತಿರುವ ಕಾಲ. ನಮ್ಮದು ಏಕಕಾಲದಲ್ಲಿ ಅನೇಕ ಕಾಲಗಳು ಜೀವಂತವಾಗಿರುವ ಸಂದರ್ಭ. ನಮ್ಮಲ್ಲಿ 21 ನೇಯ ಶತಮಾನಕ್ಕೆ ಕಾಲಿಡುತ್ತಿರುವ ಮನುಷ್ಯರಿದ್ದಾರೆ. ಅನೇಕ ಶತಮಾನಗಳ ಹಿಂದಿನ ಜೀವನ ಕ್ರಮದ ಜನರು ಕಾಡುಮೇಡುಗಳಲ್ಲಿ ವಾಸಿಸುತ್ತಿದ್ದಾರೆ. ಊರಂಚಿನಲ್ಲಿ ಜೀವಿಸುವ ಅನೇಕರ ಪಾಡು ಇದೇ ಆಗಿದೆ. ಹೀಗೆ ಅನೇಕ ಶತಮಾನಗಳು ಒಂದೇ ಶತಮಾನದಲ್ಲಿ ಮೇಳೈಸಿರುವ ಕಾಲವೆಂದರೆ 20 ನೇ ಶತಮಾನ. ಆದ್ದರಿಂದ ಈ ಶತಮಾನದ ಸಂಕಟ ಮತ್ತು ಸಂಭ್ರಮಗಳು ಮನುಷ್ಯನನ್ನು ರೂಪಿಸುತ್ತಿರುವ ಬಗೆಯೇ ಬೇರೆಯಾಗಿವೆ.

ಪ್ರಾಚೀನ ಮಧ್ಯಕಾಲೀನ ಮತ್ತು ಸಮಕಾಲೀನ ಸಂದರ್ಭಗಳು ಒಟ್ಟಿಗೇ ಕಾಡಿಸುತ್ತಿರುವ ಕಾಲ ನಮ್ಮದಾಗಿದೆ. ಇದರಿಂದ ವೈಪರೀತ್ಯದ ಬಳಿಯೇ ಸಮೂಹ ಪ್ರಜ್ಞೆ ಬೆಳೆಯುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಕಾಣುವ ಒಂದು ಮುಖ್ಯ ಗುಣಲಕ್ಷಣವೆಂದರೆ ವಿವಿಧ ಕಾಲಘಟ್ಟಗಳಲ್ಲಿ ಕವಿಗಳು ಕಂಡ ಮನುಷ್ಯನ ಕಲ್ಪನೆ. ಇದು ಶಾಸನ ಸಾಹಿತ್ಯದಿಂದ ಹಿಡಿದು ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ ಇತ್ಯಾದಿ ಆಧುನಿಕ ಸಾಹಿತ್ಯದಲ್ಲಿ ಒಡಮೂಡಿದೆ. 10 ನೇ ಶತಮಾನದ ಸಂಸ್ಕೃತ ಸಾಹಿತ್ಯಗಳ ಅತ್ಯುತ್ತಮ ಪ್ರತಿನಿಧಿಯೆಂದರೆ ಪಂಪ **'ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯ ಲಂಪಿನಿಂಪುಗಳಗರಮಾದ ಮಾನಿಸರೆ ಮಾನಿಸರ್'** ಎಂಬ ಆದರ್ಶ ಮಾನವನ ಕಲ್ಪನೆಯನ್ನು ಸಾದರಪಡಿಸಿಯೂ ಆತ ಎಲ್ಲ ಗುಣಗಳನ್ನು ಒಟ್ಟಾಗಿ ಕಾಣುವುದಿಲ್ಲ. ಒಬ್ಬನಲ್ಲಿ ಒಂದೊಂದು ಪ್ರಧಾನ ಗುಣವನ್ನು ಗುರುತಿಸುವ ಪಂಪ ವ್ಯಕ್ತಿಗಳ ಮೂಲಕ ಕಾಣುವ ಕ್ರಮ ಊಳಿಗಮಾನ್ಯ ವ್ಯವಸ್ಥೆಯಲ್ಲೂ ಸಮೂಹ ಪ್ರಜ್ಞೆಯ ಶೋಧಕ್ಕೆ ಹವಣಿಸುವ ಒಂದು ಹೊಳವಾಗಿ ಕಾಣಿಸುತ್ತ ಪ್ರಶ್ನೆ ಮತ್ತು ಪ್ರತಿಭೆಗಳು ಪ್ರತೀಕವಾಗಿ ಸಾಮಾಜಿಕ ಬದುಕು ಮತ್ತು ಸಾಹಿತ್ಯಕ ಮೌಲ್ಯಗಳನ್ನು ಬದಲಾವಣೆಯ ತೀವ್ರತೆಯಲ್ಲಿ ಶೋಧಿಸುವ ಮತ್ತು ತೆರೆದಿಡುವ ಮನುಷ್ಯ ಚಳುವಳಿಯ ಆದರ್ಶ ಈತ. ಸಮಾನತೆಗಾಗಿ ತುಡಿಯುತ್ತ ಮಣ್ಣಿನ ಕಣವನ್ನು ಕರುಳು ಕಣ್ಣುಗಳಲ್ಲಿ ತುಂಬಿಕೊಂಡು ಸಿಡಿಯುತ್ತ ನೋವಿನಿಂದ ನಲಗುತ್ತ ಆಶಾವಾದದಲ್ಲಿ ಅರಳುತ್ತ ನೊಂದವರ ದನಿಯಾಗಬಯಸುವ ಮಾನವತಾವಾದಿ. ಈ ಬಂಡಾಯ ಮನುಷ್ಯ ಸಾಮಾಜಿಕ ಚರಿತ್ರೆಯ ತಿಳುವಳಿಕೆಯಿಂದ ಕಾಲಕ್ಕೆ ಕರುಳು ಕೊಡ ಬಯಸುವ ಸಂಕಟಜೀವಿಯೂ ಹೌದು.

ವಿಜ್ಞಾನ ವೈಜ್ಞಾನಿಕ ಮನೋಧರ್ಮ ಆದಾಗ ರೂಪುಗೊಳ್ಳುವ ಮನುಷ್ಯನೇ ಬೇರೆ. ಈ ಮನುಷ್ಯ ಹೊಸ ಭಾಷೆ ಪರಿಭಾಷೆಗಳ ಮೂಲಕ ಮಾತನಾಡತೊಡಗುತ್ತಾನೆ. ವಿಜ್ಞಾನ ವಿಧಿ ಎಲ್ಲವನ್ನು ಮನುಷ್ಯ ಕೇಂದ್ರಿತ ಪರೀಕ್ಷೆಗೆ ಒಳಗು ಮಾಡುತ್ತಾನೆ. ಈತನಿಗೆ ವಿಧಿವಿಲಾಸ ಮತ್ತು ವಿಜ್ಞಾನ ವಿಲಾಸಗಳ ವೈಭವೀಕರಣದ ಬದಲು ಮಾನವೀಕರಣ ಮುಖ್ಯವಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಮನುಷ್ಯನೇ ಸಾಹಿತ್ಯದ ಕೇಂದ್ರ. ಆದರೆ ಈ ಮನುಷ್ಯ ಎಲ್ಲ ಕಾಲಕ್ಕೂ ಒಂದೇ ರೀತಿಯಲ್ಲಿರುವುದಿಲ್ಲ. ಮನುಷ್ಯನ ಸ್ವಭಾವಕ್ಕೂ ಸಾಮಾಜಿಕ ಸಂದರ್ಭವೊಂದರ ಸ್ಥಗಿತ ನೆಲೆಗಳನ್ನು ಮೀರುತ್ತ ಹೊಸ ಮನುಷ್ಯನಾಗುವ ತನಕ ಕಾಣಿಸುವುದುಂಟು. ಅಂದರೆ ಒಂದೊಂದು ಕಾಲಘಟ್ಟದಲ್ಲೂ ಆದರ್ಶ ಮನುಷ್ಯನ ಪರಿಕಲ್ಪನೆಯೊಂದು ಕೆಲಸ ಮಾಡುತ್ತಿರುತ್ತದೆ. ಅದೇ ಸಂದರ್ಭದಲ್ಲಿ ಮತ್ತೊಬ್ಬ ಮನುಷ್ಯನ ಹುಟ್ಟಿನ ಒತ್ತಡಗಳೂ ಇರಬಹುದು.

ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಮನುಷ್ಯನ ಪರಿಕಲ್ಪನೆ ವಚನಗಳಲ್ಲಿ ಬದಲಾಗಿರುತ್ತದೆ. ಈ ಬದಲಾವಣೆಯ ಪ್ರಕ್ರಿಯೆ ಪ್ರಾಚೀನ ಸಾಹಿತ್ಯದ ಕಾಲದಲ್ಲೇ ಪ್ರಾರಂಭವಾಗಿರುತ್ತದೆ. ಆಧುನಿಕ ಸಂದರ್ಭಕ್ಕೆ ಬಂದರೆ ನವೋದಯದ ಮನುಷ್ಯ ನವ್ಯದಲ್ಲಿ ಬೇರೆಯಾಗಿರುತ್ತಾನೆ. ದಲಿತ ಬಂಡಾಯದಲ್ಲಿ ಬದಲಾಗಿರುತ್ತಾನೆ. ಕನ್ನಡ ಸಾಹಿತ್ಯದ ಆರಂಭ ಕಾಲವನ್ನು ಶಾಸನ ಸಾಹಿತ್ಯದ ಮೂಲಕ ನೋಡಲಾಗುತ್ತದೆ. ಕ್ರಿ.ಶ 500 ರ ತಮಟಕಲ್ಲಿನ ಶಾಸನವೊಂದು ಗುಣಮಧುರ ಎಂಬುವನನ್ನು ದಿವ್ಯಪುರುಷ ಎಂದೆಲ್ಲಾ ಕಾವ್ಯಮಯವಾಗಿ ವರ್ಣಿಸಿದೆ. ಈ ಗುಣ ಮಧುರನಿಂದ ಆರಂಭಮಾಡಿ ಉತ್ತಮ ವ್ಯಕ್ತಿಗಳ ಒಂದು ಪರಂಪರೆಯನ್ನೇ ಪಟ್ಟಿಮಾಡಲಾಗಿದೆ. ಕಪ್ಪೆ ಅರಭಟ್ಟನ ಶಾಸನದಲ್ಲಿ ಸಿಂಗಾಲಾಂಬಿಕೆಯು ತನ್ನ ಮಗ ಲಕ್ಷ್ಮೀಧರನಿಗೆ ಚಿಕ್ಕಂದಿನಲ್ಲೇ ಹೇಳಿಕೊಟ್ಟಿರುವ ಪಾಠ ಅನುಕರಣೀಯವಾದುದು.

ಶಾಸನಗಳ ಮೂಲಕ ಸಾಮಾನ್ಯ ಮನುಷ್ಯ ನಮಗೆ ಕಾಣುವುದು ವೀರಗಲ್ಲು ಮತ್ತು ಮಾಸ್ತಿ ಕಲ್ಲುಗಳ ಮೂಲಕ ಮಾತ್ರ. ಸಾಮಾನ್ಯ ಮನುಷ್ಯರೂ ಹಲವಾರು ದೇವಾಲಯಗಳನ್ನು ನಿರ್ಮಾಣ ಮಾಡಿ, ಧಾರ್ಮಿಕ ವ್ಯವಸ್ಥೆಗೆ ತಮ್ಮ ಪಾಲನ್ನೂ ನೀಡಿದ್ದಾರೆ. ಕೆಳವರ್ಗದ ಸಾಮಾನ್ಯ ಮನುಷ್ಯನ ಬಗ್ಗೆ ನಾವು ಅಧ್ಯಯನ ಮಾಡುವಾಗ ವೈಭವೀಕರಣಗೊಳಿಸಿದ ಶೋಷಿತ ಆಳುವವರ, ಅಧಿಕಾರಿಗಳ, ಧಾರ್ಮಿಕ ಗುರುಗಳ ಸ್ಥಾನಪತಿಗಳ ವ್ಯವಸ್ಥೆಯಲ್ಲಿ ಶೋಷಿತನಾದ ಸಾಮಾನ್ಯ ಮನುಷ್ಯ ವೀರಸ್ವರ್ಗದ ಕನಸುಗಳನ್ನು ಕಾಣುತ್ತಾ ಅಂತ್ಯ ಕಂಡವನು. ಕನ್ನಡದ ಪ್ರಾಚೀನ ಪ್ರಮುಖ ಕಾವ್ಯಗಳಾದ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಗದಾಯುದ್ಧ, ಅಜಿತಪುರಾಣ, ರಾಮಚಂದ್ರ ಚರಿತ ಪುರಾಣ, ಕರ್ನಾಟಕ ಕಾದಂಬರಿ, ಯಶೋಧರ ಚರಿತೆ, ಅನಂತನಾಥ ಪುರಾಣ, ಮುಂತಾದ ಆಗಮಿಕ ಮತ್ತು ಲೌಕಿಕ ಕಾವ್ಯಗಳು ವಡ್ಡಾರಾಧನೆ, ಧರ್ಮಾಮೃತ, ಸಮಯ ಪರೀಕ್ಷೆಗಳಂಥ ಧಾರ್ಮಿಕ ಗದ್ಯ ಕಥಾ ಕೃತಿಗಳೇ

ಮನುಷ್ಯನ ಪರಿಕಲ್ಪನೆಯನ್ನು ವಿವರಿಸಲಾಗಿದೆ. ಪಂಪ ರನ್ನರ ಲೌಕಿಕ ಕಾವ್ಯದಲ್ಲಿ ಆ ಕಾಲದ ಜನರ ಗೌರವಕ್ಕೆ ಪಾತ್ರವಾಗಿದ್ದ ಮೌಲ್ಯದರ್ಶಗಳಿಗನುಗುಣವಾಗಿ ಪಾತ್ರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ನನ್ನಿ, ತ್ಯಾಗ, ಅಭಿಮಾನ, ಅಣ್ಮು, ಶೌಚ, ಸ್ವಾಮಿಭಕ್ತಿ, ಪಂಪನ ಪ್ರಸಿದ್ಧವಾದ ಪದ್ಯಗಳಲ್ಲಿ ಮೌಲ್ಯದರ್ಶಗಳು ಯಾವುವು ಎಂಬುದನ್ನು ಎತ್ತಿ ಹೇಳುತ್ತದೆ. ನೆತ್ತಮನಾಡಿ ಭಾನುಮತಿ ಸೋಲೊಡೆ ಸಂದರ್ಭ ಮತ್ತು ಕರ್ಣನ ಶವವನ್ನು ಕಂಡಾಗ ಹೃದಯ ತರೆದು ಶೋಕಿಸುವ ಸಂದರ್ಭಗಳು ಅವನಲ್ಲಿನ ಮನುಷ್ಯನನ್ನು ತೆರೆದು ತೋರುತ್ತದೆ. ಭೀಷ್ಮ, ದ್ರೋಣರ ದಾರುಣ ಅವಸ್ಥೆಯಲ್ಲಿ ದುರ್ಯೋಧನನ ಆತ್ಮ ವಿಮರ್ಶೆ, ಕರ್ಣನ ಸಾವಿನ ಸಂದರ್ಭದಲ್ಲಿ ಪರಾಕಾಷ್ಠೆಯನ್ನು ಮುಟ್ಟಿ ನಿರಂಕುಶ ಪ್ರಭು, ಸ್ವಾರ್ಥಿ ದುಷ್ಟ ದುರ್ಯೋಧನನಲ್ಲಿಯ ಮನುಷ್ಯನನ್ನು ನಮ್ಮೆದುರು ನಿಲ್ಲಿಸುತ್ತದೆ. ಲೌಕಿಕ ಕಾವ್ಯಗಳಲ್ಲಿ ಚಿತ್ರಿತಗೊಂಡಿರುವ ಮನುಷ್ಯನ ಸ್ವರೂಪ ಒಂದು ರೀತಿಯಾದರೆ ಅದೇ ಕಾಲದಲ್ಲಿ ರಚಿತವಾದ ಆಗಮಿಕ ಕಾವ್ಯಗಳಲ್ಲಿ ಚಿತ್ರಿತವಾಗಿರುವ ಮನುಷ್ಯನ ಸ್ವರೂಪ ಕೆಲವೊಮ್ಮೆ ಇದಕ್ಕಿಂತ ಭಿನ್ನವಾಗಿರುವುದುಂಟು.

ಭರತ ಮತ್ತು ಬಾಹುಬಲಿ ಯುದ್ಧ ಸಂದರ್ಭದ ಚಿತ್ರಣದಲ್ಲಿ ವ್ಯಕ್ತಿತ್ವ ವಿಕಾಸವನ್ನು ಕವಿ ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾನೆ. ಮಾನವ ಸ್ವಭಾವದ ಎಲ್ಲ ಬಣ್ಣಗಳನ್ನು ಮಾನವ ಶೋಧನೆಯ ಯಶೋಧರ ಚರಿತ್ರೆ ಅನಂತನಾಥ ಪುರಾಣದಲ್ಲಿ ಕವಿ ವಿಷಯ ಪ್ರಣಯದ ಎರಡು ಚಿತ್ರಣಗಳ ಮೂಲಕ ವಿಧಿ ಮತ್ತು ಕಾಮಗಳು ಮನುಷ್ಯನ ಬದುಕಿನಲ್ಲಿ ವಹಿಸುವ ಪಾತ್ರವನ್ನು ಅತ್ಯುಜ್ವಲವಾಗಿ ತೋರಿದ್ದಾನೆ. ಧರ್ಮ, ವಿಧಿಗಳನ್ನು ಮೀರಿದ ಪ್ರವೃತ್ತಿಯೇ ಮನುಷ್ಯನ ಸ್ವರೂಪವನ್ನು ನಿರ್ಧರಿಸುವಂಥದು ಎಂಬುದನ್ನು ಈ ಕಾವ್ಯ ಅನುಭವದ ಮಟ್ಟದಲ್ಲಿ ನಮ್ಮ ಗ್ರಹಿಕೆಗೆ ತರುತ್ತದೆ. ಮನುಷ್ಯನು ಮನುಷ್ಯನಾಗಿ ಮತ್ತು ಮನುಷ್ಯ, ಮನುಷ್ಯನನ್ನು ಮನುಷ್ಯನಂತೆ ಕಾಣುವ ವಿಧಾನವನ್ನು ಮೊದಲಿಗೆ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ.

ಮನುಷ್ಯ ಮನುಷ್ಯನಿಗೆ ಆಳಾಗುವುದನ್ನು ವಚನಧರ್ಮ ನಿರಾಕರಿಸಿತು. ರಾಜಪ್ರಭುತ್ವಗಳು ಕಚ್ಚಾಡತೊಡಗಿ ಮನುಷ್ಯ ಸಮಾಜದ ನೆಮ್ಮದಿಗೆ ಭಂಗವುಂಟಾದಾಗ ಮನುಷ್ಯ ಮತ್ತೆ ಆಲೋಚಿಸಿದ 'ಏನುಬಂದಿರಿ ಹದುಳವಿದ್ದರೆ' ಎಂದು ಕೇಳುವ ಮಾನವ ಮರ್ಯಾದೆಯನ್ನು ವಚನಕಾರರು ತಂದುಕೊಟ್ಟರು. ಸಮಾನ ಕಾರ್ಯ ಸಮಾನ ಗೌರವದ ಆಧಾರದ ಮೇರೆಗೆ ಎಲ್ಲರೂ ಮಾನವಂತರಾಗಿ, ಸಾಮೂಹಿವಾಗಿ ಬದುಕಲು ಸಾಧ್ಯವಾಯಿತು. ಹೀಗೆ 12 ನೇ ಶತಮಾನದಲ್ಲಿ ಸಾಮಾಜಿಕವಾಗಿ ಮನುಷ್ಯ ಬದಲಾದ. ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಿ ಬಡವನಯ್ಯಾ ಎನ್ನ ಕಾಲೇ ಕಂಬ, ದೇಹವೇ ದೇಗುಲ ಶಿರವೆ ಹೊನ್ನ ಕಳಸವಯ್ಯ. ಮಾನವನನ್ನೆ ಕೇಂದ್ರೀಕರಿಸಿಕೊಂಡಿರುವುದನ್ನೇ ಈ ಸಾಲುಗಳಲ್ಲಿ ಕಾಣಲಾಗುತ್ತದೆ. ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವವನು ಮನುಷ್ಯನೇ ಹೊರತು ದೇವರಲ್ಲ ಎಂಬುದನ್ನು ಅಲ್ಲಮ ಪ್ರಭು ಭಿನ್ನವಾಗಿ ಕಂಡುಕೊಂಡವರು. ಸರ್ವಜ್ಞ ದೇವರು ಸಮಾನತೆಯನ್ನು ಪೋಷಿಸುವಂತವನೇ ಹೊರತು ಮೋಸ, ಧಗ ವಂಚನೆ ಬೂಟಾಟಿಕೆಯ ಬದಲು ಉತ್ತಮ ನಡುವಳಿಕೆ ಮತ್ತು ಶುದ್ಧವಾದ ಮನಸ್ಸನ್ನೇ ಇಷ್ಟಪಡುವವನು. ಮನುಷ್ಯನಲ್ಲಿ ಕಲ್ಮಶವಿರುವುದರಿಂದಲೇ ಮನುಷ್ಯ ಮನುಷ್ಯರ ನಡುವೆ ಕಂದಕಕ್ಕೆ ಅವಕಾಶವಾಗಿದೆ ಹಾಗ ಮನುಷ್ಯನನ್ನು ಸ್ವಾರ್ಥಿಯನ್ನಾಗಿ ಮಾಡಿದೆ. ಆದ್ದರಿಂದ ತುಂಬ ಎಚ್ಚರದಿಂದ ಮನಸ್ಸನ್ನೇ ಕಾಯ್ದುಕೊಳ್ಳಬೇಕೆಂದು ಹೇಳಿದ್ದಾನೆ.

ಮನುಷ್ಯ ಮನುಷ್ಯನಾಗಿಯೇ ಇದ್ದುಕೊಂಡು ಶ್ರೇಷ್ಠವಾದ ಆದರ್ಶವೊಂದರ ಸಾಧನೆಯಿಂದ ಯಾವ ಯಾವ ಹಂತವನ್ನು ಮುಟ್ಟಬಲ್ಲ ಎಂಬುದನ್ನು ಕವಿ ರಾಘವಾಂಕ ತೋರಿಸಿದ್ದಾನೆ. ಕುಮಾರವ್ಯಾಸ ಭಾರತ ಮಾನವ ಮಹತ್ವದ ಇತಿಹಾಸವೂ ಆಗಿದೆ. ಕವಿ ದಾಖಲಿಸುವ ಮನುಷ್ಯ ಸಂಬಂಧಗಳು ಅವರ ಸ್ವಭಾವಗಳ ಶೋಧನಾತ್ಮಕ ರೀತಿ ಹಿರಿದಾದುದು. ಕುಮಾರವ್ಯಾಸನಲ್ಲಿ ಯುದ್ಧ ಸಂದರ್ಭದಲ್ಲಿ ಮನುಷ್ಯನ ಸ್ವಾತಂತ್ರ್ಯಕ್ಕೂ ಅವಕಾಶವಿದೆ.

ಕೀರ್ತನ ಸಾಹಿತ್ಯದಲ್ಲಿ ಆತನ ಮನಸ್ಸಿನಲ್ಲಿರುವ ತಾಮಸವೇ ಕಾರಣ ಎಂದು ನಂಬಿದವರು. ಮನುಷ್ಯ ಈಸಬೇಕು ಇದ್ದು ಜೈಸಬೇಕು ಎಂಬ ಘೋಷಣೆಯೊಂದಿಗೆ ಬದುಕಿನಲ್ಲಿ ಸತತ ಹೋರಾಟವಿರಬೇಕು ಎಂದು ಹೇಳುತ್ತಾರೆ. 'ಮಾನವ ಜನ್ಮ ದೊಡ್ಡದು ಇದಹಾನಿಮಾಡಬೇಡಿ ಹುಚ್ಚಪ್ಪಗಳಿರಾ' ಎಂದು ಹೇಳುವುದರ ಮೂಲಕ ಮನುಷ್ಯನ ಜನ್ಮದ ಹಾಗೂ ಆತನ ಬದುಕುವ ಘನತೆಯನ್ನು ಎತ್ತಿಹಿಡಿದಿದ್ದಾರೆ. ಕನಕದಾಸರು ಕುಲದ ಸಂಕುಚಿತ ಭಾವನೆಯನ್ನು ನಾನಾ ರೀತಿಯಲ್ಲಿ ಖಂಡಿಸಿ ಮಾನವತೆಯೊಂದೇ ಎಲ್ಲಕ್ಕಿಂತ ಮಿಗಿಲು ಎಂದಿದ್ದಾರೆ. ಮನುಷ್ಯ ನಿರ್ಮಿತವಾದ ಎಲ್ಲ ಜಾತಿಕಟ್ಟುಗಳನ್ನು ಮೀರುತ್ತಾ ಬಂದ ಕನಕದಾಸರು ಜಾತ್ಯಾತೀತನಾಗುತ್ತ ಮಾನವೀಯತೆಯನ್ನು ಎತ್ತಿ ಹಿಡಿದಿದ್ದಾರೆ.

ಮಾನವ ಮನಸ್ಸುಗಳ ಕೇಂದ್ರವಾಗಿರುವ ರತ್ನಾಕರವರ್ಣಿಯ ಭರತೇಶ ವೈಭವದಲ್ಲಿ ಸಂಸಾರದ ಸ್ಪಷ್ಟ ಚಿತ್ರಣವೇ ಇದೆ. ಭರತ ಚಕ್ರವರ್ತಿಯಾಗಿದ್ದರೂ ಸಾಮಾನ್ಯ ಮನುಷ್ಯನಂತೆ ಆತನ ನಡುವಳಿಕೆಗಳಿದ್ದು ಅವೆಲ್ಲ ಹೆಚ್ಚು ಲೌಕಿಕವಾಗಿವೆ. 97 ಸಾವಿರ ಸ್ತ್ರೀಯರೊಂದಿಗಿನ ಭರತ ಸಂಪೂರ್ಣ ಮಾನವನಾಗಿದ್ದಾನೆ. ಭರತ ದಿಗ್ವಿಜಯಕ್ಕೆ ಹೋಗುವ ಮುನ್ನ ತನ್ನ ತಾಯಿ ಯಶಸ್ವತೀ ದೇವಿಯನ್ನು ಭೇಟಿ ಮಾಡಿ ಅವಳ ಆಶೀರ್ವಾದ ಪಡೆಯುತ್ತಾನೆ. ಆಸ್ಥಾನದಲ್ಲಿದ್ದಾಗಲೂ ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿ ಕೊಂಡು ಆಟವಾಡಿಸುವುದು. ಮಕ್ಕಳೊಂದಿಗೆ ಸರಸವಾಗಿ ಮಾತನಾಡುವುದು ತನ್ನಿಬ್ಬರು ಮಕ್ಕಳು ವೈರಾಗ್ಯ ತಾಳುತ್ತೇವೆಂದು ಹೇಳಿದ್ದಾಗ ಚಡಪಡಿಸುವುದು, ಗಿಳಿಯ ತಮಾಷೆಯಲ್ಲಿ ಭಾಗವಹಿಸುವುದು, ನಾದಿನ ಮಕರಂದಾಜಿಯ ಸರಸ ಸಂಭಾಷಣೆಯಲ್ಲಿ ಮುಳುಗುವುದು, ಹೆಣ್ಣು ಮಕ್ಕಳನ್ನು ಬೀಳ್ಕೊಡುವುದು ಈ ಎಲ್ಲ ಸಂದರ್ಭಗಳನ್ನು ಗಮನಿಸಿದರೆ ಭರತನು ಚಕ್ರವರ್ತಿಯಾಗಿದ್ದು ಗಾಂಭೀರ್ಯವಿಲ್ಲದೆ ಕೇವಲ ಮನುಷ್ಯನಂತೆ ಸಭ್ಯನಾಗಿ ಸಂದರ್ಭಕ್ಕೆ ತಕ್ಕಂತೆ ವರ್ತಿಸಿದ ರೀತಿ ಅತ್ಯಂತ ಮಹತ್ವದ್ದು.

'ಕಂಗಳ ಕರುಳ ಕೊಯ್ದವರ ಮನದ ತಿರುಳ ಹುರಿದವರ ಮಾತಿನ ಮೊದಲ ಬಲ್ಲವರನೆನಗೊಮ್ಮೆ ತೋರಾ ಗುಹೇಶ್ವರ' ಎಂಬ ವಚನದಲ್ಲಿ ಮಾತನ್ನು ಕಲಿತ ಮೇಲೆ ಮನುಷ್ಯ ಅದನ್ನು ತಾನು ಕಂಡು ಅನುಭವಿಸಿದದನ್ನು ಆಡಲು ಬಳಸಿರುವುದಕ್ಕಿಂತ ತಾನೆಂದೂ ಅನುಭವಿಸಿಲ್ಲದುದನ್ನು ಕಂಡಿಲ್ಲದುದನ್ನು ಕುರಿತು ಆಡಲು ಬಳಸಿರುವದೇ ಹೆಚ್ಚು.

ನಮ್ಮ ಸಾಹಿತ್ಯ, ಕಲೆ, ಮೀಮಾಂಸೆಗಳು ಇಂತಹ ಭ್ರಮಾ ಸಂಗತಿಗಳಿಂದಲೇ ತುಂಬಿ ಹೋಗಿವೆ. ಕಾಲ್ಪನಿಕ ಸಂರಚನೆಗಳು ನಮ್ಮ ಬದುಕನ್ನು ನಿಯಂತ್ರಿಸುತ್ತವೆ. ನಾವು ವರ್ತಮಾನದಲ್ಲಿ ಬಾಳಲು ಅವುಗಳಿಂದ ಮುಕ್ತರಾಗಬೇಕೆಂಬ ಮಾತಿಗಿಂತ ಮೊದಲಿದ್ದ ಆವರಣಕ್ಕೆ ಒಮ್ಮೆ ಹೋಗಿ ಅಲ್ಲಿಂದ ಯಾವಾಗ ಆರಂಭವಾಗಬೇಕು ಮನುಷ್ಯ ಮಾತನಾಡಬೇಕು, ಚಿಂತಿಸಬೇಕು, ಆಲೋಚಿಸಬೇಕು, ಧ್ವನಿಯೆತ್ತಬೇಕು ಎಂಬ ಆಶಯ ಈ ವಚನದ ಮೂಲಕ ಅಭಿವ್ಯಕ್ತಗೊಂಡಿದೆ.

ಇದಿರಿಗೆ ನಿಂತ ಸೋದರರನ್ನು, ಗುರುಗಳನ್ನು, ಮಾವಂದಿರನ್ನು, ತಾತ ಮುಂತಾದ ಹಿರಿಯರನ್ನು ಹೇಗೆ ಕೊಲ್ಲಲಿ? ಎಂದು ಕಂಗಾಲಾಗಿ ನಿಂತ ಅರ್ಜುನನ್ನು ಅವರನ್ನೆಲ್ಲ ಕೊಲ್ಲಲು ಹುರಿದುಂಬಿಸುತ್ತಿರುವ ಕೃಷ್ಣನ ಚಿತ್ರ ಇನ್ನೊಂದು ಯುದ್ಧವೆನ್ನುವುದು ರಾಜರ ನಡುವಿನದ್ದು ಅದಕ್ಕೆ ಸಾಮಾನ್ಯರನ್ನು ಏಕೆ ಕೊಲ್ಲಬೇಕು ಎಂದು ತಾವಿಬ್ಬರೇ ಹೋರಾಡಿ ಕಡೆಗೆ ತಮ್ಮನೇ ಅಣ್ಣನನ್ನು ಸೋಲಿಸಿ ಸಾಮ್ರಾಜ್ಯಶಾಹಿ ಪ್ರವೃತ್ತಿಯ ಮೂರ್ತರೂಪವನ್ನು ಅನಾಮತ್ತು ಮೇಲೆತ್ತಿ ಆಚೆಗೆ ಬಗೆಯಬೇಕು. ಅಷ್ಟರಲ್ಲಿ ತಾನು ಮಾಡುತ್ತಿರುವುದೇನು ಸ್ವಂತ ಅಣ್ಣನನ್ನು ಲೋಕದೆದುರಿಗೆ ಅಪಮಾನಿಸಿ ಅವನ ಬದುಕನ್ನು ಅಪಮಾನಿಸುದೆ ಅದು ಯಾತಕ್ಕಾಗಿ? ಹೀಗೆ ಬಗೆದ ನಂತರ ತಾನೇ ಅವನಾಗುವುದಿಲ್ಲವೇ? ಇದೇನು ಮಾಡಿ ಬಿಡುತ್ತಿದ್ದೆ ಎಂದು ಕಸಿವಿಸಿಪಟ್ಟು ಎತ್ತಿದ ಭರತನನ್ನು ಹಾಗೆಯೇ ಮೆಲ್ಲಗೆ ಕೆಳಗಿಳಿಸಿ ಎಲ್ಲ ಕೇಡಿನ ಮೂಲ ಅಧಿಕಾರ ಮತ್ತು ದುರಾಸೆಯೇ ಎಂಬುದನ್ನು ತಾನು ಅರಿತು ಲೋಕವೂ ಅರಿವಂತೆ ಮಾಡಿದ ಬಾಹುಬಲಿಯ ಚಿತ್ರ ಮನುಷ್ಯ ದೇವರಾಗಿರುವ ಚಿತ್ರವನ್ನು ಕಾಣಲಾಗುತ್ತದೆ. **ಮನುಷ್ಯ ಮಾನವನಾಗುವುದು ನಾಗರೀಕತೆಯ ವಿಕಾಸ ಕ್ರಮ ಎಂದು ಹೇಳುತ್ತೇವೆ. ಮನುಷ್ಯನಾಗಿಯೇ ಉಳಿಯಬೇಕಾದ ತುರ್ತು ಪ್ರಸ್ತುತ ಕಾಲಘಟ್ಟಕ್ಕೆ ಅವಶ್ಯಕವಾಗಿದೆ. ಮನುಷ್ಯ ಮಾನವತ್ವ ಗಳಿಸಿಕೊಂಡರೆ ಮಾತ್ರ ಇತರ ಪ್ರಾಣಿಗಳಿಗಿಂತ ಶ್ರೇಷ್ಟನಾಗುತ್ತಾನೆ. ಇಲ್ಲದಿದ್ದರೆ ಅವನೊಬ್ಬ ಪ್ರಾಣಿಯಷ್ಟೇ.**

**ಪರಾಮರ್ಶನಗ್ರಂಥಗಳು**


1. ಗುಂಡಪ್ಪ ಎಲ್–ಆದಿಪುರಾಣಸಂಗ್ರಹ–ತನುಮನಪ್ರಕಾಶನ 1954
2. ನಟರಾಜ ಬೂದಾಳು –ಮಾತಿನಮೊದಲುಪಲ್ಲವಪ್ರಕಾಶನ– ಚನ್ನಪಟ್ಟಣ 2019
3. ನಟರಾಜ ಬೂದಾಳು –ಹಿಂದಣ ಹೆಜ್ಜೆಯನರಿತಲ್ಲದೆ–ಪಲ್ಲವಪ್ರಕಾಶನ 2017
4. ನಾರಾಯಣ.ಪಿ.ವಿ –ಸಂಕ್ಷಿಪ್ತ ಆದಿಪುರಾಣ ಕೈದೀವಿಗೆ–ಹೇಮಂತಸಾಹಿತ್ಯ–ಬೆಂಗಳೂರು 2017
5. ಬರಗೂರು ರಾಮಚಂದ್ರಪ್ಪ– ಕನ್ನಡಸಾಹಿತ್ಯದಲ್ಲಿಮನುಷ್ಯನ ಪರಿಕಲ್ಪನೆ ಕರ್ನಾಟಕಸಾಹಿತ್ಯಅಕಾಡೆಮಿಬೆಂಗಳೂರು 1993
6. ಮುಗಳಿ.ರಂ.ಶ್ರೀ – ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು – ಹೇಮಂತ ಸಾಹಿತ್ಯ 2014